# <u>ಹೆಚ್ಚುವರಿ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ ಭಾಲ್ಕಿ</u>

**<u>ಸಿ.ಸಿ. ನಂ.3884/2024</u>**

| | | |
|---|---|---|
| ದೂರುದಾರ | : | ಸರ್ಕಾರದ ಪರವಾಗಿ ಖಟಕ ಚಿಂಚೋಳಿ ಪೊಲೀಸ ಠಾಣೆ, ಖಟಕ ಚಿಂಚೋಳಿ. |

ವಿರುದ್ಧ

| | | |
|---|---|---|
| ಆರೋಪಿತರು | : | 1. ಪುಂಡಲಿಕ ತಂ. ಮಹಾದೇವ ಕಾಂಬಳೆ, ಪ್ರಾಯಃ 50 ವರ್ಷ, ವೃತ್ತಿಃ ಕೂಲಿಕೆಲಸ.<br><br>2. ಬಾಲಿಕಾಬಾಯಿ ಗಂ. ಪುಂಡಲಿಕ ಕಾಂಬಳೆ, ಪ್ರಾಯಃ 48 ವರ್ಷ ವೃತ್ತಿಃ ಮನೆಕೆಲಸ<br>ಇಬ್ಬರೂ ಸಾಃ ಹೊನ್ನಳ್ಳಿ ಗ್ರಾಮ, ತಾಃ ಭಾಲ್ಕಿ ಜಿಲ್ಲೆಃ ಬೀದರ. |

## – :: <u>ದೋಷಾರೋಪಣೆ</u> :: –

**ದೇಶಭೂಷಣ ಕೌಜಲಗಿ, ಬಿ.ಎ.,ಎಲ್.ಎಲ್.ಬಿ., ಪ್ರ.ದ.ನ್ಯಾದಂ., ಭಾಲ್ಕಿ ಆದ ನಾನು ಈ ಮೂಲಕ ನಿಮ್ಮ ಮೇಲೆ ಮಾಡುವ ದೋಷಾರೋಪಣೆ ಏನೆಂದರೆ,**

ಖಟಕ ಚಿಂಚೋಳಿ ಪೊಲೀಸ ಠಾಣೆಯ ಸರಹದ್ದಿಯಲ್ಲಿನ ಹೊನ್ನಳ್ಳಿ ಗ್ರಾಮದಲ್ಲಿ ಚಾಸಾ–1 ಹಾಗೂ ಆರೋಪಿತರ ಮನೆಗಳು ಒಂದೆ ಓಣಿಯಲ್ಲಿ ಅಕ್ಕಪಕ್ಕದಲ್ಲಿ ಇದ್ದು 1 ನೇ ಆರೋಪಿಯಾದ ನೀವು ಆಗಾಗ ತನ್ನ ಮನೆಯ ಮುಂದಿನ ಕಸವನ್ನು ಚಾಸಾ–1 ರವರ ಮನೆಯ ಮುಂದೆ ಹಾಕುವುದು ಮಾಡುತಿದ್ದು ಮತ್ತು ಅದನ್ನು ಕೇಳಲು ಹೋದ ಚಾಸಾ–1 ಮತ್ತು 4 ರವರ ಜೊತೆ ಜಗಳ ತೆಗೆದು ಅವಾಚ್ಯವಾಗಿ ಬೈಯುವುದು ಮಾಡುತ್ತಿದ್ದು ದಿನಾಂಕ 28–05–2024 ರಂದು ಬೆಳಿಗ್ಗೆ 08–00 ಗಂಟೆಯ ಸುಮಾರಿಗೆ ಚಾಸಾ–1 ಮತ್ತು 4 ರವರು ತಮ್ಮ ಮನೆಯ ಮುಂದೆ ನಿಂತಿರುವಾಗ ಇದೇ

ವೇಳೆಯಲ್ಲಿ 1 ನೇ ಆರೋಪಿಯಾದ ನೀವು ನಿಮ್ಮ ಮನೆಯ ಮುಂದಿನ ಕಸವನ್ನು ಉಡುಗಿ ಚಾಸಾ–1 ರವರ ಮನೆಯ ಮುಂದೆ ಹಾಕಿದ್ದಾಗ ಚಾಸಾ–1 ರವರು 1 ನೇ ಆರೋಪಿಯಾದ ನಿಮಗೆ ಯಾಕ್ರಿ ಕಸ ನಮ್ಮ ಮನೆಯ ಮುಂದೆ ಹಾಕುತ್ತೀರಿ ಅಂತ ಕೇಳಿದಕ್ಕೆ, 1 ನೇ ಆರೋಪಿಯಾದ ನೀವು ಚಾಸಾ–1 ರವರಿಗೆ "ಏ ರಂಡಿ ನಾನು ಕಸ ಹಾಕುವನೆ ಅದು ಎನ್ ಮಾಡ್ಕೋತಿರಿ ಮಾಡಕೋರಿ" ಅಂತಾ ಅವಾಚ್ಯ ಶಬ್ದಗಳಿಂದ ಬೈದು ಅವರ ಶಾಂತಿಗೆ ಭಂಗ ಉಂಟು ಮಾಡಿ ಅವರಿಗೆ ಅವಮಾನ ಆಗುವಂತೆ ನಿಂದಿಸುವ ಮೂಲಕ ನೀವು ಭಾ.ದಂ.ಸಂ.504 ಸಹವಾಚಕ ಕಲಂ 34 ರನ್ವಯ ಶಿಕ್ಷಾರ್ಹ ಅಪರಾಧವನ್ನು ಮಾಡಿರುತ್ತೀರಿ.

ಎರಡನೆಯದಾಗಿ, ಆರೋಪಿತರಾದ ನೀವು ಸಮಾನ ಉದ್ದೇಶ ಹೊಂದಿ ಈ ಮೇಲೆ ಹೇಳಿದ ಅದೇ ದಿನಾಂಕ, ಸಮಯ ಹಾಗೂ ಸ್ಥಳದಲ್ಲಿ ನಿಮ್ಮ ಪೈಕಿ 1 ನೇ ಆರೋಪಿಯಾದ ನೀವು ಸ್ವಇಚ್ಚೆಯಿಂದ ಕಸಬರಗಿಯಿಂದ ಚಾಸಾ–1 ರವರ ಎಡಗಡೆಯ ಕಣ್ಣಿನ ಮೇಲೆ ಹೊಡೆದು ಸಾದಾ ಸ್ವರೂಪದ ಗಾಯವನ್ನುಂಟು ಮಾಡುವ ಮೂಲಕ ಭಾ.ದಂ.ಸಂ.ಕಲಂ.324 ಸಹವಾಚಕ ಕಲಂ 34 ರನ್ವಯ ಶಿಕ್ಷಾರ್ಹ ಅಪರಾಧವನ್ನು ಮಾಡಿರುತ್ತೀರಿ.

ಕೊನೆಯದಾಗಿ, ಆರೋಪಿತರಾದ ನೀವು ಸಮಾನ ಉದ್ದೇಶ ಹೊಂದಿ ಈ ಮೇಲೆ ಹೇಳಿದ ಅದೇ ದಿನಾಂಕ, ಸಮಯ ಹಾಗೂ ಸ್ಥಳದಲ್ಲಿ 2 ನೇ ಆರೋಪಿಯಾದ ನೀವು ಚಾಸಾ–1 ರವರನ್ನು ಉದ್ದೇಶಿಸಿ "ಈ ರಂಡಿಗಿ ಬಿಡಬ್ಯಾಡ್ರಿ ಇವತ ಖತಂ ಮಾಡ್ರಿ" ಅಂತಾ ಜೀವ ಬೆದರಿಕೆ ಹಾಕುವ ಮೂಲಕ ಭಾ.ದಂ.ಸಂ ಕಲಂ 506 ಸಹವಾಚಕ ಕಲಂ ಸಹವಾಚಕ ಕಲಂ 34 ರನ್ವಯ ಶಿಕ್ಷಾರ್ಹ ಅಪರಾಧವನ್ನು ಮಾಡಿರುತ್ತೀರಿ.

**ಆರೋಪಿತರುಃ–**

ಪ್ರಶ್ನೆ1 : ಸದ್ರಿ ದೋಷಾರೋಪಣೆಯ ಸಾರಾಂಶ ನಿಮಗೆ ತಿಳಿಯಿತೆ ?

ಉತ್ತರ :

ಆ–1

ಆ–2

ಪ್ರಶ್ನೆ 2: ಷದ್ರಿ ಆಪಾದನೆಯನ್ನು ಒಪ್ಪಿಕೊಳ್ಳುವಿರಾ ಅಥವಾ ವಿಚಾರಣೆಯಾಗಬೇಕೇ ?

ಉತ್ತರಃ

ಆ–1

ಆ–2

(ದೋಷಾರೋಪಣೆಯ ಸಾರಾಂಶವನ್ನು ಆರೋಪಿತರಿಗೆ ಓದಿ ಹೇಳಿ ಅವರು ಕೊಟ್ಟ ಉತ್ತರವನ್ನು ಯಥವತ್ತಾಗಿ ದಾಖಲಿಸಿಕೊಳ್ಳಲಾಯಿತು)

ಸದರ ಅಪರಾಧಗಳು ನನ್ನ ಸಂಜ್ಞೆಯಲ್ಲಿ ಜರುಗುವುದರಿಂದ ವಿಚಾರಣೆಗೆ ಗುರಿಯಾಗಬೇಕೆಂದು ನಿರ್ದೇಶಿಸುತ್ತೇನೆ.

ಸ್ಥಳಃ ಭಾಲ್ಕಿ

ದಿನಾಂಕಃ 28–02–2026

ಹೆಚ್ಚುವರಿ ಪ್ರ. ದ. ನ್ಯಾ ದಂ.

ಭಾಲ್ಕಿ